STATEMENT SHOWING THE STRENGTH OF THE CITY/DISTRICT SPECIAL BRANCH

Sl. No.	City District	DCP	ACP	PIs	PSIs	ASI	HCs	PCs
1	Bangalore City S.B.	1	2	10	39	...	106	77
2	Railways	...	...	...	1	...	4	8
3	Bangalore Dist	...	...	1	1	...	3	...
4	Tumkur Dist.	...	...	...	1	...	3	...
5	Kolar	...	...	...	1	...	4	...
6	K.G.F.	...	...	...	1	...	5	...
7	Mysore	...	...	1	2	...	6	...
8	Mandya	...	...	...	1	...	6	...
9	Hassan	...	...	...	1	...	3	...
10	Kodagu	...	...	1	1	...	8	1
11	Dakshina Kannada	...	...	1	1	...	9	1
12	Uttara Kannada	...	...	...	2	...	12	...
13	Chikmagalur	...	...	...	1	...	2	...
14	Chitradurga	...	...	1	2	...	6	...
15	Bellary	...	...	1	1	...	4	...
16	Shimoga	...	...	1	1	1	8	...
17	Belgaum	...	...	1	2	...	8	1
18	Dharwad	...	...	...	2	...	13	...
19	Bijapur	...	...	...	2	...	10	...
20	Gulbarga	...	...	...	3	...	12	...
21	Raichur	...	...	1	1	...	10	...
22	Bidar	...	...	...	1	...	7	
	Total	1	2	19	68	1	249	83

ಬೆಂಗಳೂರಿನ ಪ್ರಕಾಶನಗರದಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಿಲ್ಲದಿರುವುದು

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).— ಮಾನ್ಯ ಮಂಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದ ಪ್ರಕಾಶನಗರದಲ್ಲಿ ಬಹುತೇಕ ರಸ್ತೆಗಳಲ್ಲಿನ ಒಳಚರಂಡಿ ವ್ಯವಸ್ಥೆ ಹಾಗೂ ಮ್ಯಾನ್ ಹೋಲ್‌ಗಳು ಹತ್ತಾರು ವರ್ಷಗಳ ಹಿಂದೆ ನಿರ್ಮಾಣವಾಗಿದ್ದು ಈಗ ಅವೆಲ್ಲವೂ ಶಿಥಿಲಗೊಂಡಿರುವುದು ನಿಜವಲ್ಲವೇ ?

ಆ) ಈ ಶಿಥಿಲಗೊಂಡ ಮ್ಯಾನ್‌ಹೋಲ್ ಮತ್ತು ಚರಂಡಿ ವ್ಯವಸ್ಥೆ ಸರಿಯಿಲ್ಲದೆ ಅಲ್ಲಿನ ಕಲ್ಮಶ ನೀರು ಕುಡಿಯುವ ನೀರಿನ ಬಾವಿಗಳಿಗೆ ನುಗ್ಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರವು ಕೂಡಲೇ ಆ ಪ್ರದೇಶದ ಚರಂಡಿ ವ್ಯವಸ್ಥೆಯನ್ನು ಸರಿಪಡಿಸಿ, ಶಿಥಿಲಗೊಂಡಿರುವ ಮ್ಯಾನ್ ಹೋಲ್‌ಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಒಳಚರಂಡಿ ವ್ಯವಸ್ಥೆ ಇಲ್ಲದ ಕೆಲವು ನಿವಾಸಿಗಳು ಕಲ್ಮಶ ನೀರನ್ನು ತೆರೆದ ಚರಂಡಿ ಬಾವಿಗಳಿಗೆ ಹರಿದು ಹೋಗಲಂ ಬೀಡುತ್ತಾರೆ. ಸ್ವಂತ ಮನೆಗಳ ಸ್ಯಾನಿಟರಿ ಸಂಪರ್ಕಗಳು ಮತ್ತು ಮ್ಯಾನ್ ಹೋಲ್‌ಗಳ ಸಂಪರ್ಕಗಳು ಹಾನಿಯಾಗಿರುವುದರಿಂದಲೂ, ಬಾವಿಯ ನೀರು ಮಲಿನವಾಗುತ್ತದೆ.

ಇ) ತಮ್ಮ ಸ್ವಂತ ಮನೆಗಳಿಗೆ ಸ್ಯಾನಿಟರಿ ಸಂಪರ್ಕವನ್ನು ಹಾಕಿಸುವುದು ಮತ್ತು ಅವುಗಳನ್ನು ದುರಸ್ತಿ ಮಾಡಿಸುವುದು ಮನೆಯ ಮಾಲೀಕರುಗಳ ಜವಾಬ್ದಾರಿಯಾಗಿರುತ್ತದೆ. ಅಂತಹ ಮನೆ ಮಾಲೀಕರುಗಳಿಗೆ ಅವುಗಳನ್ನು ರಿಪೇರಿ ಮಾಡಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಬೆಂಗಳೂರು ಜಲಮಂಡಲಿಯು ಸಹ ಶಿಥಿಲಗೊಂಡಿರುವ ಒಳಚರಂಡಿ ವ್ಯವಸ್ಥೆಯನ್ನು ಮತ್ತು ಮ್ಯಾನ್ ಹೋಲ್‌ಗಳನ್ನು ರಿಪೇರಿ ಮಾಡಿಸಲು ಕ್ರಮ ಕೈಗೊಳ್ಳುತ್ತದೆ.

ರಾಜ್ಯದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ

೫೨೪. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).— ಮಾನ್ಯ ಮುಖ್ಯ ಮಂತ್ರಿಗಳಿಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿರುವ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ;

ಆ) ಈ ಅಧಿಕಾರಿಗಳು ಈಗ ಎಲ್ಲೆಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ (ಈ ಅಧಿಕಾರಿಗಳ ಹೆಸರುಗಳು ಹಾಗೂ ಅವರು ಈಗ ಕಾರ್ಯ ನಿರ್ವಹಿಸುತ್ತಿರುವ ಇಲಾಖೆಗಳು ಸಾರ್ವಜನಿಕ ಉಪಯೋಗಕ್ಕೆ ಪೂರ್ಣ ಮಾಹಿತಿ ಕೊಡುವುದು ;

ಇ) ಸರ್ಕಾರಕ್ಕೆ ನೀಡಿರುವ ಐ. ಎ. ಎಸ್. ಅಧಿಕಾರಿಗಳಲ್ಲಿ ಎಷ್ಟು ಮಂದಿ ಕೇಂದ್ರದ ಎರವಲಂ ಸೇವೆಯ ಮೇಲೆ ಹೋಗಿದ್ದಾರೆ ಹಾಗೂ ಎಷ್ಟು ಮಂದಿ ವಿದೇಶಗಳಲ್ಲಿರುವ ಭಾರತೀಯ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ? (ಹೆಸರು ಮತ್ತು ವಿವರ ಕೊಡುವುದು).

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಕರ್ನಾಟಕದಲ್ಲಿ ೩೫೬ ಐ.ಎ.ಎಸ್. ಮತ್ತು ೧೦೯ ಐ.ಪಿ.ಎಸ್. ಅಧಿಕಾರಿಗಳಿದ್ದಾರೆ.

ಆ) ಅಧಿಕಾರಿಗಳ ಹೆಸರು ಮತ್ತು ಕಾರ್ಯ ನಿರ್ವಹಿಸುತ್ತಿರುವ ಇಲಾಖೆಗಳ ಪಟ್ಟಿಯನ್ನು ಅನುಬಂಧ ೧ ರಲ್ಲಿ ಕೊಡಲಾಗಿದೆ.

ಇ) ಕೇಂದ್ರ ಸರ್ಕಾರದಲ್ಲಿ ಎರವಲು ಸೇವೆಯಲ್ಲಿರುವವರು :

ಐ.ಎ.ಎಸ್.	ಐ.ಪಿ.ಎಸ್.
೪೪	೨೨

ವಿದೇಶದಲ್ಲಿರುವ ಭಾರತೀಯ ಕಛೇರಿಗಳಲ್ಲಿ :

ಐ.ಎ.ಎಸ್.	ಐ.ಪಿ.ಎಸ್.
೩	ಇಲ್ಲ

(ಹೆಸರು ಮತ್ತು ವಿವರಗಳ ಪಟ್ಟಿಯನ್ನು ಅನುಬಂಧ–೨ ರಲ್ಲಿ ಕೊಡಲಾಗಿದೆ